# ಮಕ್ಕಳೊಡನೆ ನನ್ನ ಅನುಭವಗಳು

ಬಸುದೇವ್ ಭಟ್

***

ಶಿಕ್ಷಕನಾಗಿ ತರಗತಿಯೊಳಗಿನ ನನ್ನ ಅನುಭವಗಳು ಒಂದು ಪ್ರಯಾಣವಿದ್ದಂತೆ. ನಾನು ತರಗತಿಯನ್ನು ಪ್ರವೇಶಿಸಿದೊಡನೆ, ಸೌಹಾರ್ದಯುತ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸುತ್ತೇನೆ. ಹೊಸ ಪಾಠಗಳನ್ನು ಕೆಲವು ಚಟುವಟಿಕೆಗಳು ಮತ್ತು ಕವಿತೆಗಳೊಡನೆ ಆರಂಭಿಸುತ್ತೇನೆ. ಕೆಲವು ಮಕ್ಕಳು ಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದರೆ, ಇನ್ನು ಕೆಲವರು ಬೇರೆಯದೇ ಪ್ರಶ್ನೆಗಳನ್ನು ಕೇಳುತ್ತಾರೆ. ನಾನು ತರಗತಿಗೆ ಪ್ರವೇಶಿಸಿದ ತತ್‌ಕ್ಷಣ ಮಕ್ಕಳು ಸಂತೋಷಪಡುತ್ತಾರೆ ಮತ್ತು ಬಿಡುಗಡೆಯ ಭಾವವನ್ನು ಹೊಂದುತ್ತಾರೆ. ಕೆಲವು ಮಕ್ಕಳು ಆನಂದದಿಂದ ಕೇಕೆ ಹಾಕಿ ಕೂಗುತ್ತಾರೆ, `ಭಟ್ ಸರ್ ಬಂದರು......ಭಟ್ ಸರ್ ಬಂದರು'. ಮಕ್ಕಳೊಟ್ಟಿಗೆ ಕೆಲಸ ಮಾಡುವುದು ಮತ್ತು ಅವರೊಟ್ಟಿಗೆ ಬೆರೆಯುವುದು ನನಗೆ ಹಲವು ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಅವಕಾಶ ನೀಡಿದೆ. ಮಕ್ಕಳ ತಾಜಾ ಉತ್ಸಾಹ ಮತ್ತು ಸ್ಫೂರ್ತಿಗೆ ಸೂಕ್ತ ದಿಕ್ಕು ತೋರಿಸಲು ನಾನು ಖುಷಿ ಪಡುತ್ತೇನೆ. ಪ್ರತಿಯೊಂದು ಮಗುವೂ ತನ್ನದೇ ವೇಗದಲ್ಲಿ ಕಲಿಯುತ್ತದೆ.

ಕೆಲವು ಮಕ್ಕಳು ಅರ್ಥಮಾಡಿಕೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ ಎನ್ನುವುದು ನಿಜ. ಪ್ರತಿಯೊಂದು ಮಗುವೂ ಬೇರೆಬೇರೆ ಆಲೋಚನಾ ಕ್ರಮವನ್ನು ಹೊಂದಿರುತ್ತದೆ ಮತ್ತು ತರಗತಿಯಲ್ಲಿ ಕಲಿತ ಕತೆಗಳು ಹಾಗೂ ಕವನಗಳನ್ನು ಆಧರಿಸಿದ ಹಲವು ಚಟುವಟಿಕೆಗಳನ್ನು ಆಧರಿಸಿ, ಇಡೀ ತರಗತಿಯು ಒಂದು ನಿರ್ಧಾರಕ್ಕೆ ಬರುತ್ತದೆ. ಮಕ್ಕಳು ಸ್ವತಃ ಅಥವಾ ಶಿಕ್ಷಕರ ನೆರವು ಪಡೆದು, ಕೆಲವು ಮಾದರಿಗಳನ್ನು ರಚಿಸುತ್ತಾರೆ ಮತ್ತು ಅವುಗಳನ್ನು ಸ್ಪರ್ಶಿಸಿ ಮತ್ತು ಅನುಭವಿಸುವ ಮೂಲಕ ಅರ್ಥಮಾಡಿಕೊಳ್ಳುವಿಕೆಯನ್ನು ಬೆಳೆಸಿಕೊಳ್ಳುತ್ತಾರೆ. ಮಕ್ಕಳು ಶೀಘ್ರವಾಗಿ ಕಲಿಯಲು ಈ ಚಟುವಟಿಕೆಗಳು ನೆರವಾಗುತ್ತವೆ. ಅವರು ಪಠ್ಯಪುಸ್ತಕವಲ್ಲದೆ ಇಂಥ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ತಮಗೆ ಕಲಿಸಿದ ಪಾಠಗಳನ್ನು ಅಥವಾ ಪದ್ಯವನ್ನು ಆಧರಿಸಿದ ಚಟುವಟಿಕೆಗಳನ್ನು ಗುಂಪಿನಲ್ಲಿ ಅಭಿನಯಿಸಲು ಇಲ್ಲವೇ ತಾವು ಬರೆದಿದ್ದನ್ನು ಓದಲು ಇಷ್ಟ ಪಡುತ್ತಾರೆ ಮತ್ತು ಮಕ್ಕಳೊಟ್ಟಿಗೆ ಇವನ್ನೆಲ್ಲ ಮಾಡುವುದನ್ನು ಒಬ್ಬ ಶಿಕ್ಷಕನಾಗಿ ನಾನು ಇಷ್ಟಪಡುತ್ತೇನೆ. ಮಕ್ಕಳು ಬರೆದ ಚಿತ್ರಗಳನ್ನು ನೋಡುವುದು ಅಥವಾ ಅವರು ಬರೆದಿದ್ದನ್ನು ಕೇಳುವುದು ಒಂದು

ಸುಂದರ ಅನುಭವ. ಎಲ್ಲ ಮಕ್ಕಳೂ ಪ್ರತಿಭಾವಂತರೇ. ಅವರು ಪಠ್ಯಪುಸ್ತಕಗಳಿಗಿಂತ ಚಟುವಟಿಕೆಗಳೆಡೆಗೆ ಹೆಚ್ಚು ಆಸಕ್ತರಾಗಲು ಕಾರಣವೇನೆಂದರೆ, ಇದರಿಂದ ಪಾಠಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಆದ್ದರಿಂದ, ನಾವು ಪಾಠಗಳನ್ನು ಒಂದು ಪಾತ್ರಾಭಿನಯದ ರೂಪದಲ್ಲಿ ಪ್ರಸ್ತುತಪಡಿಸುತ್ತೇವೆ ಮತ್ತು ಮಕ್ಕಳಿಗೆ ಸುಲಭವಾದ ಮಾರ್ಗಗಳನ್ನು ಅಳವಡಿಸಿಕೊಳ್ಳುತ್ತೇವೆ.

ತರಗತಿಯ ಪ್ರತಿಯೊಂದು ಮಗುವನ್ನೂ ಮನಸ್ಸಿನಲ್ಲಿಟ್ಟುಕೊಂಡು ಪಾಠಯೋಜನೆಗಳನ್ನು ಸಿದ್ಧಪಡಿಸಲಾಗುತ್ತದೆ. ಇದರಿಂದ ಪ್ರತಿ ಮಗುವಿನ ಅಗತ್ಯಕ್ಕೆ ಅನುಗುಣವಾಗಿ ಮಾಹಿತಿ ನೀಡಬಹುದು. ಪ್ರತಿ ಮಗುವೂ ತನ್ನದೇ ವೇಗದಲ್ಲಿ ಕಲಿಯುತ್ತದೆ ಎಂಬ ದೃಷ್ಟಿಕೋನದಿಂದ ಕಲಿಸಲಾಗುತ್ತದೆ. ತರಗತಿಯಲ್ಲಿ ತಾಜಾತನ ಹಾಗೂ ಉತ್ಸಾಹ ತರುವಂಥ ಚಟುವಟಿಕೆಗಳನ್ನು ಯೋಜಿಸಲಾಗುತ್ತದೆ. ಇದರಿಂದ ಮಕ್ಕಳು ಹೊಸ ಮಾಹಿತಿಯನ್ನು ನಿರಾತಂಕವಾಗಿ ಸ್ವೀಕರಿಸುತ್ತಾರೆ. ಬೋಧನೆ ವೇಳೆ ನಾನಾ ಉದಾಹರಣೆಗಳನ್ನು ಕೊಡುವುದು ಮತ್ತು ಚಿತ್ರಗಳನ್ನು ತೋರಿಸುವುದು ಮಕ್ಕಳು ಕಲಿಯಲು ನೆರವಾಗುತ್ತದೆ.

ಮಕ್ಕಳು ಯಾವಾಗಲೂ ಕಾಲ್ಪನಿಕವಾದದ್ದನ್ನು ಮಾಡುವುದನ್ನು ನಾವು ನೋಡಿರುತ್ತೇವೆ. ಅವರು ಓದಿನ ಜೊತೆಗೆ ಆಟೋಟ, ನೃತ್ಯ ಮತ್ತು ಗಾಯನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಅವರು ಶಾಲೆಗೆ ಬರಲು ಇಚ್ಛಿಸುತ್ತಾರೆ. ಚೆನ್ನಾಗಿ ಬರೆದಾಗ, ಕಾಗದದಿಂದ ವಸ್ತುಗಳನ್ನು ಹಾಗೂ ಮಣ್ಣಿನಿಂದ ಆಟದ ಸಾಧನಗಳನ್ನು ಮಾಡಿದಾಗ, ಅವರಿಗೆ ಸಂತೋಷವಾಗುತ್ತದೆ. ಕೈಯಿಂದ ತಯಾರಿಸಿದ ವಸ್ತುಗಳ ಮೇಲೆ ಚಿತ್ರ ಬಿಡಿಸುವುದನ್ನು ಇಚ್ಛಿಸುತ್ತಾರೆ. ಹೊಸ ಕತೆಗಳನ್ನು ಹೇಳಬೇಕೆಂದು ಶಿಕ್ಷಕರನ್ನು ಯಾವಾಗಲೂ ಕೇಳುತ್ತಿರುತ್ತಾರೆ. ಮಕ್ಕಳಿಗೆ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಜ್ಞಾನವನ್ನು ಕೊಡಬೇಕಾಗುತ್ತದೆ. ಇದರಿಂದ ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಅವರು ಗುಂಪಿನಲ್ಲಿ ಕುಳಿತುಕೊಳ್ಳಳು ಹಾಗೂ ಎ4 ಗಾತ್ರದ ಹಾಳೆಯ ಮೇಲೆ ಚಿತ್ರ ಬಿಡಿಸಲು ಇಷ್ಟಪಡುತ್ತಾರೆ ಮತ್ತು ಇಂಥ ಸಂದರ್ಭದಲ್ಲಿ ಅವರ ಹುರುಪು, ಕಾರ್ಯೋತ್ಸಾಹ ಹಾಗೂ ಚೈತನ್ಯವನ್ನು ನೋಡಬಹುದು. ಈ ಶಾಲೆ ನನಗೆ ಪುಸ್ತಕಗಳಿಂದ ಮಾತ್ರವಲ್ಲದೆ ಮಕ್ಕಳಿಂದಲೂ ಕಲಿಯುವುದು ಸಾಕಷ್ಟಿದೆ ಎಂಬ ವಾಸ್ತವಾಂಶವನ್ನು ತಿಳಿಸಿಕೊಟ್ಟಿತು. ತರಗತಿ ಕೊಠಡಿಯಲ್ಲಿ ವಿವಿಧ ರೀತಿಯ ಮಕ್ಕಳು ಇರಲಿದ್ದು, ಓದುವಿಕೆ ಮತ್ತು ಬರೆಯುವ ಚಟುವಟಿಕೆಗಳು ಒಂದು

ರೀತಿಯ ಕಲೆ ಎಂದು ಭಾವಿಸುವ ಮಕ್ಕಳೂ ಇರುತ್ತಾರೆ. ತರಗತಿಯಲ್ಲಿ ಬಳಸುವ ಪದ್ಧತಿ ಸರಳವಾಗಿದ್ದು, ಕಲಿಕೆಗೆ ನೆರವಾಗಬೇಕು. ಮಕ್ಕಳ ತಾಯ್ನುಡಿಯು ಬೇರೆ ಭಾಷೆಗಳು ಹಾಗೂ ವಿಷಯಗಳ ಕಲಿಕೆಯ ಮೂಲಾಧಾರ. ಅವರು ತಮ್ಮದೇ ವೇಗದಲ್ಲಿ ಕಲಿಯಲು ಬಯಸುತ್ತಾರೆ. ಅಂಕಿಸಂಖ್ಯೆಗಳ ಬದಲು ವಿಷಯವೊಂದನ್ನು ತಮ್ಮದೇ ಆದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹೊಸ ಕವನವೊಂದನ್ನು ಓದಬೇಕು ಎನ್ನಿಸಿದಾಗ, ಅದನ್ನು ಪದಗಳು ಮತ್ತು ಸಾಲುಗಳಾಗಿ ಭಾಗ ಮಾಡುತ್ತಾರೆ ಮತ್ತು ಆನಂತರ, ಒಟ್ಟಿಗೆ ಓದುತ್ತಾರೆ. ಹೀಗೆ, ಅದನ್ನು ಕಲಿಯುತ್ತಾರೆ. ನಾವು ಡೋಲು ಹಾಗೂ ಹಾರ್ಮೋನಿಯಂ ಜೊತೆಗೆ ಹಾಡಲು ಕೆಲವು ಹಾಡುಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ (ಕೆಳಗೆ ನೀಡಲಾಗಿದೆ). ಅವುಗಳನ್ನು ಹಾಡಿದಾಗ ಇಡೀ ಶಾಲೆ ಸಂಗೀತದಿಂದ ಮಾರ್ದನಿಸುತ್ತದೆ ಹಾಗಾಗಿ ಸಂಗೀತ ಶಾಲೆಯಲ್ಲಿಮುಖ್ಯ ಸ್ಥಾನ ಪಡೆದಿದೆ.

* ಸಾಂಭರ್ ಝೀಲ್ ಸೇ ಬರಾಯಾ ಭೈರೂ ಮಾರ್ವಾಡಿನೆ, ಬಂಜಾರಾ ನಮಕ್ ಲಾಯಾ ವೂಂಟ್ ಗಾಡಿ ಮೇ * ಇಸ್ ಲಿಯೇ ರಾಹ್ ಸಂಘರ್ಷ್ ಕಿ ಹಮ್ ಚುನೇ, ಜಿಂದಗಿ ಆಸುವೋಂಸೇ ನಹಾಯಿ ಹೋ * ಗೀತ್ ಗಾ ರಹಾ ಹೈ ಆಜ್ ಹಮ್ * ಹಂ ಹೋಂಗೇ ಕಾಂಯಾಬ್

ನಾನು ಬೋಧನೆ-ಕಲಿಕೆ ಸಾಮಗ್ರಿ (ಟಿಎಲ್ಎಂ) ಸಿದ್ಧಗೊಳಿಸುವ ಅನುಭವವನ್ನು ಪಡೆದೆ. ಈ ಎಲ್ಲ ಪ್ರಯತ್ನಗಳು ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನು ಹೆಚ್ಚಿಸಿದವು ಹಾಗೂ ಶಾಲೆ ಅವರಿಗೆ ಹೆಚ್ಚು ಆಸಕ್ತಿದಾಯಕವಾಗಿ ಪರಿಣಮಿಸಿತು.

***

**ಬಸುದೇವ್ಭಟ್:** ಇವರು ಉತ್ತರಕಾಶಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ 2012 ರಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಬೋಧಿಸುವ ಮುಖ್ಯ ವಿಷಯಗಳೆಂದರೆ, ಸಮಾಜವಿಜ್ಞಾನ ಮತ್ತು ಇಂಗ್ಲಿಷ್. ಅವರು ಹಿಂದಿ, ಇಂಗ್ಲಿಷ್ ಹಾಗೂ ಪರಿಸರ ವಿಜ್ಞಾನವನ್ನು ಕೂಡ ಬೋಧಿಸಿದ್ದಾರೆ. ಶಾಲಾ ಗ್ರಂಥಾಲಯದ ನಿರ್ವಹಣೆಯ ಅನುಭವವೂ ಅವರಿಗಿದೆ. ಅವರ ಇಮೇಲ್: basudev.bhatt@azimpremjifoundation.org